## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 33(46) |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.01.2026 |
| ಉತ್ತರಿಸುವ ಸಚಿವರು | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ಚಿತ್ರದುರ್ಗ ಜಿಲ್ಲೆ ಹಿರಿಯೂರಿನಲ್ಲಿ ಹೊಸದಾಗಿ ಪ್ರಾರಂಭಿಸಿರುವ ಕೈಗಾರಿಕಾ ಪಾರ್ಕ್‌ಗಳ ಸಂಖ್ಯೆ ಎಷ್ಟು; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ಮೇಟಿಕುರ್ಕೆ ಕೈಗಾರಿಕಾ ಪ್ರದೇಶವನ್ನು 1156-12½ ಎಕರೆ ವಿಸ್ತೀರ್ಣ ಜಮೀನಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. |
| ಆ. | ಪರಿಹಾರ ನೀಡಲಾಗಿರುವ ರೈತರ ಸಂಖ್ಯೆ ಎಷ್ಟು; ಇನ್ನು ಉಳಿಕೆ ರೈತರ ಪರಿಹಾರ ಯಾವಾಗ ನೀಡಲಾಗುತ್ತದೆ; ನ್ಯಾಯಾಲಯದಲ್ಲಿರುವ ಪ್ರಕರಣ ಸಂಖ್ಯೆ ಎಷ್ಟು; (ವಿವರ ನೀಡುವುದು) | ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ಮೇಟಿಕುರ್ಕಿ ಮತ್ತು ಕರಿಯೋಬನಹಳ್ಳಿ ಗ್ರಾಮಗಳಲ್ಲಿ ಒಟ್ಟು 1156-12½ ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಪರಿಹಾರ ಪಾವತಿ ವಿವರ ಈ ಕೆಳಕಂಡಂತಿರುತ್ತದೆ: |

| | ಎಕರೆಗಳಲ್ಲಿ |
|---|---|
| ಒಪ್ಪಂದದ ದರದಡಿ ಪರಿಹಾರ ಪಾವತಿಸಿರುವ ವಿಸ್ತೀರ್ಣ | 949-34½ |
| ಸಾಮಾನ್ಯ ಐತೀರ್ಪಿನಂತೆ ಭೂಪರಿಹಾರವನ್ನು ನ್ಯಾಯಾಲಯಕ್ಕೆ ಠೇವಣಿ ಮಾಡಿರುವ ವಿಸ್ತೀರ್ಣ | 15-24 |
| ಪರಿಹಾರ ಪಾವತಿ ಕಾರ್ಯ ಚಾಲ್ತಿಯಲ್ಲಿರುವ ವಿಸ್ತೀರ್ಣ | 190-00 |
| **ಒಟ್ಟು** | **1156-12½** |

**ನ್ಯಾಯಾಲಯದ ಪ್ರಕರಣದ ವಿವರಗಳು**

| ಕ್ರ ಸಂ | ನ್ಯಾಯಾಲಯದ ಪ್ರಕರಣದ ಸಂಖ್ಯೆ | ಸರ್ವೆ ನಂಬರ್ ಮತ್ತು ವಿಸ್ತೀರ್ಣ |
|---|---|---|
| | **ಮೇಟಿಕುರ್ಕಿ ಗ್ರಾಮ** | |
| 1 | W.P No.28905/2023 | 80/4, 80/5 ರಲ್ಲಿ ಒಟ್ಟು 26-28 ಎಕರೆ |
| 2 | O.S No.242/2022<br>O.S No.17/2023 | 93/1 ರಲ್ಲಿ 3-34 ಎಕರೆ |
| 3 | O.S No.117/2023 | 97/2 ರಲ್ಲಿ 6-00 ಎಕರೆ |
| 4 | O.S No.45/2021 | 98/1 ರಲ್ಲಿ 7-01 ಎಕರೆ |
| 5 | O.S No.128/2022 | 109, 259 ರಲ್ಲಿ 38-36 ಎಕರೆ |

| | | | |
|---|---|---|---|
| | | | 6 | O.S No.1/2012 | 110/2, 110/3 ರಲ್ಲಿ 24-00 ಎಕರೆ |

<table>
<tr><td></td><td></td><td>
<table>
<tr><td>6</td><td>O.S No.1/2012</td><td>110/2, 110/3 ರಲ್ಲಿ 24-00 ಎಕರೆ</td></tr>
<tr><td>7</td><td>O.S No.130/2022</td><td>131/2 ರಲ್ಲಿ 8-07 ಎಕರೆ</td></tr>
<tr><td>8</td><td>O.S No.110/2022</td><td>131/4 ರಲ್ಲಿ 4-09 ಎಕರೆ</td></tr>
<tr><td>9</td><td>O.S No.16/2016</td><td>131/5 ರಲ್ಲಿ 4-00 ಎಕರೆ, 132/3 ರಲ್ಲಿ 12-36 ಎಕರೆ</td></tr>
<tr><td>10</td><td>O.S No.168/2023</td><td>134/1 ರಲ್ಲಿ 10-17 ಎಕರೆ</td></tr>
<tr><td colspan="3">ಕರಿಯೋಬೇನಹಳ್ಳಿ ಗ್ರಾಮ</td></tr>
<tr><td>11</td><td>O.S No.48/2022</td><td>54/1 ರಲ್ಲಿ 20-22 ಎಕರೆ</td></tr>
<tr><td>12</td><td>O.S No.183/2023</td><td>65/1 ರಲ್ಲಿ 11-10 ಎಕರೆ</td></tr>
<tr><td>13</td><td>O.S No.04/2022</td><td>71 ರಲ್ಲಿ 16-23 ಎಕರೆ</td></tr>
</table>
</td></tr>
<tr><td>ಇ.</td><td>ಪಾರ್ಕ್‌ಗೆ ನೀಡುವ ಮೂಲ ಸೌಕರ್ಯಗಳಾವುವು; ಎಷ್ಟು ದಿನದಲ್ಲಿ ನೀಡಲಾಗುತ್ತದೆ;</td><td>ಕೆಐಎಡಿಬಿ ಯಿಂದ ಮೇಟಿಕುರ್ಕೆ ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ (15ಮೀ., 18ಮೀ., 24ಮೀ. ಅಗಲ), ಆರ್‌ಸಿಸಿ ಒಳಚರಂಡಿ, ನೀರು ಸರಬರಾಜು & ವಿದ್ಯುತ್ ಸಂಪರ್ಕಗಳನ್ನು ಒದಗಿಸಲಾಗುತ್ತದೆ. ದಿನಾಂಕ 30-06-2026 ರೊಳಗೆ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಲು ಯೋಜನೆ ನಿರೂಪಿಸಿ ಕೊಳ್ಳಲಾಗಿರುತ್ತದೆ.</td></tr>
<tr><td>ಈ.</td><td>ಪಾರ್ಕ್‌ಗೆ Allot ಆಗಿರುವ ನೀರಿನ, ವಿದ್ಯುತ್ ಪ್ರಮಾಣವೆಷ್ಟು; ಎಲ್ಲಿಂದ ನೀಡಲಾಗುತ್ತಿದೆ.</td><td>ಮೇಟಿಕುರ್ಕೆ ಕೈಗಾರಿಕಾ ಪ್ರದೇಶಕ್ಕೆ ವಾಣಿ ವಿಲಾಸ ಸಾಗರದಿಂದ 5 ಎಂಎಲ್‌ಡಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹಾಗೂ 15 MVA ಸಾಮಾರ್ಥ್ಯದ ಕೆಐಎಡಿಬಿಯ 66/11 ಕೆವಿ ಯ ಸಬ್‌ಸ್ಟೇಷನ್ ನಿಂದ ವಿದ್ಯುತ್ ಸಂಪರ್ಕವನ್ನು ಪೂರೈಸಲಾಗುವುದು & ಪರ್ಯಾಯವಾಗಿ ಮಲ್ಲಪ್ಪನಹಳ್ಳಿ ಸಬ್‌ಸ್ಟೇಷನ್‌ನಿಂದ ವಿದ್ಯುತ್‌ನ್ನು ಪೂರೈಸಲಾಗುತ್ತದೆ.</td></tr>
<tr><td>ಉ.</td><td>ಈ ಹಿಂದೆ ಹಿರಿಯೂರು ಸೀಗೆಹಟ್ಟಿ, ಯಲ್ಲದಕೆರೆ, 228, 229, 230, 231, 232, 236 ರವರೆಗೆ ಸರ್ಕಾರಿ ಜಮೀನು ನೀಡಿದ್ದು, ಇದುವರೆವಿಗೂ 440 ಎಕರೆ ಯಾವುದೇ ಪ್ರಗತಿ ಇಲ್ಲದಿರುವುದು ವಾಪಸ್ಸು ಪಡೆಯದೇ ಇರಲು ಕಾರಣವೇನು?</td><td>ಮಂಡಳಿಯು ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಜೆ.ಜಿ. ಹಳ್ಳಿ ಹೋಬಳಿ, ಯಲ್ಲದಕೆರೆ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟಾರೆ 531-21 ಎಕರೆ ಸರ್ಕಾರಿ ಜಮೀನನ್ನು ಕೈಗಾರಿಕಾ ಪ್ರದೇಶದ ಲ್ಯಾಂಡ್ ಬ್ಯಾಂಕ್ ಯೋಜನೆಗೆ ಭೂಸ್ವಾಧೀನಪಡಿಸಲು ದಿನಾಂಕ:05-06-2009 ರಂದು ಕೆಐಎಡಿ ಕಾಯ್ದೆ ಕಲಂ 3(1), 1(3) ರಡಿ ಅಧಿಸೂಚನೆ ಹೊರಡಿಸಲಾಗಿತ್ತು.<br><br>ದಿನಾಂಕ:19-06-2010ರ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ, ಮೆ:Trans India Shipping Services Pvt Ltd., ರವರ 0.5 MTPA Integrated Steel Plant and 72 MW Captive Power Plant ಘಟಕ ಸ್ಥಾಪಿಸುವ ಯೋಜನೆಗೆ ಅನುಮೋದನೆ ನೀಡಿ, ಮಂಡಳಿ ವತಿಯಿಂದ ಯಲ್ಲದಕೆರೆ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟು 440 ಎಕರೆ ಜಮೀನನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.<br><br>ಕಂದಾಯ ಇಲಾಖೆಯ ಸರ್ಕಾರಿ ಆದೇಶ ದಿನಾಂಕ: 30-04-2012 ರಲ್ಲಿ, ಯಲ್ಲದಕೆರೆ ಗ್ರಾಮದ ಸರ್ವೆ ನಂ.228/ಪಿ,</td></tr>
</table>

| | | |
|---|---|---|
| | | 229/ಪಿ, 230/ಪಿ, 231/ಪಿ, 232/ಪಿ & 236/ಪಿ ಗಳಲ್ಲಿ ಒಟ್ಟಾರೆ 440.05 ಎಕರೆ ಜಮೀನನ್ನು ಮೆ:Trans India Shipping Services Pvt Ltd., ರವರಿಗೆ ಹಂಚಿಕೆ ಮಾಡುವ ಸಲುವಾಗಿ ಮಂಡಳಿಗೆ ವರ್ಗಾವಣೆ ಮಾಡಲಾಗಿದೆ.<br><br>ದಿನಾಂಕ: 02-07-2012 ರಂದು ನಡೆದ ಕೆಐಎಡಿಬಿ ಮಂಡಳಿ ಸಭೆಯ ನಿರ್ಣಯದನ್ವಯ, ಮೆ: Trans India Shipping Services Pvt Ltd., ರವರಿಂದ ಸದರಿ ಜಮೀನಿನ ಮೊತ್ತ ಪ್ರತಿ ಎಕರೆಗೆ ರೂ.1.25 ಲಕ್ಷದಂತೆ & ಶೇ.10 ರಷ್ಟು ಮಂಡಳಿ ಸೇವಾ ಶುಲ್ಕ ಸೇರಿ ಒಟ್ಟಾರೆ ರೂ.6,05,17,183/- ಗಳನ್ನು ಮಂಡಳಿಗೆ ಪಾವತಿಸಿಕೊಳ್ಳಲಾಗಿದೆ.<br><br>ಮುಂದುವರೆದು, ಒಟ್ಟಾರೆ 440-05 ಎಕರೆ ಸರ್ಕಾರಿ ಜಮೀನಿನ ಪೈಕಿ, ಸರ್ವೆ ನಂ. 230/ಪಿ ರಲ್ಲಿನ 98-32 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ಹಿಂದೆ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದುದರಿಂದ ದಿನಾಂಕ: 02-07-2012 ರಂದು ನಡೆದ ಕೆಐಎಡಿ ಮಂಡಳಿ ಸಭೆಯ ನಿರ್ಣಯದಂತೆ, ಸರ್ವೆ ನಂ.230/ಪಿ ರಲ್ಲಿನ 98-32 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ದಿನಾಂಕ: 02-03-2013 ರಂದು ಕೆಐಎಡಿ ಕಾಯ್ದೆ ಕಲಂ 3(1), 1(3) ರಡಿ ಅಧಿಸೂಚನೆ ಹೊರಡಿಸಲಾಗಿದೆ.<br><br>ಮಂಡಳಿಯು ಒಟ್ಟಾರೆ 440-05 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಒಟ್ಟಾರೆ ರೂ.5,50,15,625/-ಗಳನ್ನು ಕಂದಾಯ ಇಲಾಖೆಗೆ 2013ನೇ ಸಾಲಿನಲ್ಲಿ ಪಾವತಿಸಲಾಗಿರುತ್ತದೆ. ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ ರವರು ಕೆಐಎಡಿ ಕಾಯ್ದೆ ಕಲಂ 28(8) ರಡಿ ಒಟ್ಟಾರೆ 440-05 ಎಕರೆ ಜಮೀನನ್ನು ದಿನಾಂಕ: 10-07-2013 ರಂದು ಮಂಡಳಿಗೆ ವರ್ಗಾವಣೆ ಮಾಡಿರುತ್ತಾರೆ.<br><br>ತದನಂತರ, ಮೆ:Trans India Shipping Services Pvt Ltd., ರವರಿಗೆ ದಿನಾಂಕ:19-06-2010ರ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯ ನಿರ್ಣಯದನ್ವಯ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಜೆ.ಜಿ. ಹಳ್ಳಿ ಹೋಬಳಿ, ಯಲ್ಲದಕೆರೆ ಗ್ರಾಮದ ಸರ್ವೆ ನಂ.228/ಪಿ, 229/ಪಿ, 230/ಪಿ, 231/ಪಿ, 232/ಪಿ & 236/ಪಿ ರಲ್ಲಿ ಒಟ್ಟಾರೆ 440-05 ಎಕರೆ ಜಮೀನನ್ನು ದಿನಾಂಕ:13-09-2013 ರಂದು ಹಂಚಿಕೆ ಮಾಡಿ, ದಿನಾಂಕ:16-09-2013 ರಂದು ಸ್ವಾಧೀನ ಪತ್ರ ನೀಡಿ ದಿನಾಂಕ:16-09-2013 ರಂದು 10 ವರ್ಷಗಳ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.<br><br>ಮೆ:Trans India Shipping Services Pvt Ltd., ರವರು ದಿನಾಂಕ:15-02-2018 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಸದರಿ ಜಮೀನಿನಲ್ಲಿ Private Industrial Park ಸ್ಥಾಪಿಸಲು ಅನುಮೋದನೆ ಪಡೆದಿರುತ್ತಾರೆ ಹಾಗೂ ಯೋಜನೆ ಅನುಷ್ಠಾನಗೊಳಿಸಲು ಎರಡು ವರ್ಷ ಕಾಲಾವಕಾಶ ಪಡೆದಿರುತ್ತಾರೆ.<br><br>ದಿನಾಂಕ:15-09-2023 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ, ಸದರಿ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಎರಡು ವರ್ಷ ಹೆಚ್ಚುವರಿ ಕಾಲಾವಕಾಶ ನೀಡಿ, ಯೋಜನೆ ಅನುಮೋದನೆಯನ್ನು ಮೆ:Trans India Shipping Services Pvt Ltd., ಇಂದ ಮೆ:Trans |

| | | |
|---|---|---|
| | | India Industrial Park Pvt Ltd., ಗೆ ವರ್ಗಾವಣೆ ಮಾಡಲು ಅನುಮೋದನೆ ನೀಡಲಾಗಿದೆ.<br><br>ಮುಂದುವರೆದು, ದಿನಾಂಕ 12-11-2025 ರಂದು ನಡೆದ 156 ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ, ಸದರಿ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಎರಡು ವರ್ಷ ಹೆಚ್ಚುವರಿ ಕಾಲಾವಕಾಶ ನೀಡಿರುತ್ತಿದೆ. |

**ಸಂಖ್ಯೆ: ಸಿಐ 37 ಐಎಪಿ 2026**

**(ಎಂ.ಬಿ. ಪಾಟೀಲ್)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು